

# ಸಂದರ್ಭವನ್ನು ಕಳಕೊಂಡ ಹೆಂಗಸು



# ಸಂದರ್ಭವನ್ನು ಕಳಕೊಂಡ ಹೆಂಗಸು



ಅಮೇರಿಕ ದೇಶದ ಕ್ಯಾಲಿಫೋರ್ನಿಯ ರಾಜ್ಯಕ್ಕೆ ಸೇರಿದವಳೆ ಈ ಸ್ಕಾಟಿಮೆರ್ಲಿನ್. ಶ್ರೀಮಂತರ ಕುಟುಂಬಕ್ಕೆ ಸೇರಿದವಳಾದದರಿಂದ ಜೀವನದಲ್ಲಿ ಯಾವ ಕಷ್ಟವನ್ನು ಅನುಭವಿಸದೇ ಬಹಳ ಸುಖ ಜೀವನ ದಲ್ಲಿದ್ದಳು. ಮೆರ್ಲಿನ್ ಸಮಯವನ್ನು ಮನರಂಜನೆಗಳಲ್ಲಿ ಕಳೆಯುವದರಲ್ಲಿ ಆಸಕ್ತಳಾಗಿದ್ದಳು, ಹೆಚ್ಚು ಸಮಯವನ್ನು ಹಾಗೆಯೇ ಕಳೆಯುತ್ತಿದ್ದಳು. ಅವಳು ನಾಟ್ಯವಾಡುವವಳು ಕೂಡ ಆಗಿದ್ದಳು.

ತಮ್ಮ ಊರಿನಲ್ಲಿ ನಡೆಯುವ ಕಾರ್ಯಕ್ರಮಗಳಿಗೆ, ಹಬ್ಬ ಹರಿ ದಿನಗಳಿಗೆ, ಕುದುರೆ ಸವಾರಿಗಳಿಗೆ, ಚಿತ್ರಮಂಜರಿಗಳಿಗೆ, ನಾಟ್ಯಮಂದಿರಗಳಿಗೆ ತಪ್ಪದೆ ಹೋಗುತ್ತಿದ್ದಳು. ಅವಳ ಅಂದಚಂದದ ನಾಟ್ಯವು ಆ ದೇಶದಲ್ಲಿ ಅನೇಕರನ್ನು ಗಮನ ಸೆಳೆದಿತ್ತು. ಅವಳು ಪ್ರಸಿದ್ಧವಾಗುತ್ತಾ ವಾಗುತ್ತಾ ಹೆಸರು, ಹೊಗಳಿಕೆ, ಧನೈಶ್ವರ್ಯಗಳು ಹೆಚ್ಚಾಯಿತು.

ಒಂದು ದಿನ ಹೊರಗೆ ಹೋಗಿ ಮನೆಗೆ ಹಿಂತಿರುವಾಗ ಎಲ್ಲಿ ನೋಡಿದರು ಗೋಡೆಗಳಲ್ಲಿ ಪೋಸ್ಟರುಗಳನ್ನು ಅಂಟಿಸಿರುವದನ್ನು ನೋಡಿದಳು. ತನ್ನ ಕಾರನ್ನು ನಿಲ್ಲಿಸಿ ಅದನ್ನು ಓದಿ ನೋಡಿದಳು. ದೇವರ ಬಗ್ಗೆ ಹೇಳುವದಕ್ಕೆ ಒಬ್ಬ ದೇವಮನುಷ್ಯನು ಆ ಊರಿಗೆ ಬರುವದಾಗಿ ಅದರಲ್ಲಿ ತಿಳಿಸಲ್ಪಟ್ಟಿತ್ತು. ಅವಳು ಅದನ್ನು ಓದಿದ ನಂತರ ಇವರು ಮಹಾ ದೊಡ್ಡ ವ್ಯಕ್ತಿ ನಾನು ಇವರ ಬಗ್ಗೆ ಓದಿದ್ದೇನೆ ಅಂದುಕೊಂಡು ಮನೆಗೆ ಹೋದಳು.

ಮಾರಣೇ ದಿನ ಅವಳ ಮನೆಗೆಲಸ ಮಾಡುವ ಕೆಲಸದ ಹೆಂಗಸು ತಾನು ನಿನ್ನೆಯ ದಿನ ಕ್ರೈಸ್ತರ ಕೂಟಕ್ಕೆ ಹೋದಂತದ್ದನ್ನೂ, ಅಲ್ಲಿ ನಡೆದಂತ ಸಂಗತಿಗಳನ್ನು ಹೇಳಿದಳು.ಇದನ್ನು ಕೇಳಿಸಿಕೊಂಡ ಮೆರ್ಲಿನಿನ ಮನ ಸ್ಸಿನಲ್ಲಿಯೂ ಅದರ ಮೇಲೆ ಏನೋ ಇಷ್ಟಬಂದು ಅಂದಿನ ಸಾಯಂಕಾಲದ ಕೂಟಕ್ಕೆ ಹೊರಟಳು.ಮೆರ್ಲಿನ್ ತನ್ನ ಕಾರನ್ನು ಓಡಿಸಿಕೊಂಡು ಹೋಗು ತ್ತಿರುವಾಗಲೇ ಜನಗಳು ಗುಂಪು ಗುಂಪಾಗಿ ಆ ಕೂಟಕ್ಕೆ ಹೋಗುತ್ತಿರು ವಂತದ್ದನ್ನು ಕಂಡಳು. ತನಗೆ ಆ ಕೂಟ ಹಿಡಿಸಲಿಲ್ಲವೆಂದರೆ ಕೂಟದ ಅರ್ಧದಲ್ಲಿ ಹಿಂತಿರುಗಿ ಬಿಡೋಣವೆಂದು ನೆನೆಸಿ ಒಂದು ಮೂಲೆಯಲ್ಲಿ ಕಾರನ್ನು ನಿಲ್ಲಿಸಿ, ಒಳಗೆ ಹೋದಳು. ಕೆಲವು ಕ್ಷಣದ ನಂತರ ಆ ಕೂಟ ಪ್ರಾರಂಭವಾಯಿತು. ಕಾರ್ಯಕ್ರಮಗಳು ನಡೆಯುತ್ತಾ ಇತ್ತು. ಅವಳು ಇಷ್ಟು ದಿನ ಸಮಯವನ್ನು ಕಳೆಯುತ್ತಿದ್ದಂತ ಮನರಂಜನೆಯ ಕಾರ್ಯ ಕ್ರಮಗಳಿಗಿಂತ ಇದು ವ್ಯತ್ಯಾ ಸವಾಗಿತ್ತು. ಅವಳ ಮನಸ್ಸಿಗೆ ಒಂದು ಸಮಾಧಾ ನವನ್ನು ತರುವಂತದ್ದಾಗಿಯೂ ಇತ್ತು.

ಕೂಟವು ಆರಂಭವಾಯಿತು. ಆ ದೇವಮನುಷ್ಯನು ಮಾತ ನಾಡಲು ಪ್ರಾರಂಭಿಸಿದರು. ಕೂಡಿ ಇದ್ದಂತ ಎಲ್ಲರು ಬಹು ಆಸಕ್ತಿಯಿಂದ, ಅವರು ಹೇಳುವಂತದ್ದೆಲ್ಲವನ್ನು ಗಮನಿಸುತ್ತಿದ್ದರು. ಪಾಪದಲ್ಲಿ ಸಿಳುಕಿರು ವವರು ದಂಡನೆಗೆ ತಪ್ಪಿಸಿಕೊಳ್ಳುವುದು ಹೇಗೆ? ಎಂಬ ಮಾತನ್ನು ಅವರು ಹೇಳುವಾಗ, ಆ ಕೂಟದಲ್ಲಿದ್ದಂತ ಅನೇಕರು ತಮ್ಮ ಪಾಪಗಳನ್ನು ಒಪ್ಪಿಕೊಂ ಡರು. ಅದರೊಳಗೆ ನಾಟ್ಯಗಾರತಿಯಾದ ಈ ಹೆಂಗಸು ಒಬ್ಬಳು.

ಕೂಟವು ಮುಗಿಯುವ ಸಮಯದಲ್ಲಿ, ಜನಗಳು ಅನೇಕರು ತಮ್ಮ ಪಾಪಗಳಿಗಾಗಿ ಮಾನಸಾಂತರ ಪಟ್ಟು, ಅಳುತ್ತಾ ಇದ್ದರು. ಆ ದೇವಮನುಷ್ಯನು ವೇದಿಕೆಯಿಂದ ಹೇಳುವ ಒಂದೊಂದು ಮಾತು ಅವ ರಿಗಾಗಿ ಮಾತಾಡುವಂತೆಯೆ ಇಂತು.ನೀವು ಮಾಡಿದ ಪಾಪಗಳು ಎಷ್ಟು ಘೋರವಾಗಿದ್ದರು, ಯೇಸುವಿನ ಬಳಿ ಪಾಪರಿಕೆಯನ್ನು ಮಾಡಿ, ಇಂದೇ ಅದನ್ನು ಬಿಟ್ಟು ಬಿಟ್ಟರೆ ನಿಮ್ಮ ಪಾಪಗಳು ಕ್ಷಮಿಸಲ್ಪಡುತ್ತವೆ, ನೀವು ನಿತ್ಯಜೀವನವನ್ನು ಹೊಂದುತ್ತೀರ ಎಂದು ಪ್ರಸಂಗಮಾಡಿದರು.

ಇದನ್ನು ಕೇಳಿಸಿಕೊಂಡ ಮೆರ್ಲಿನ್, ಆಕೆ ತಾನು ದೇವರನ್ನು ಬಿಟ್ಟು ದೂರ ಹೋದ ಪಾಪಿ ಎಂದು ಗ್ರಹಿಸಿಕೊಂಡಳು. ಆದರೆ ಅದು ಒಂದು ಕ್ಷಣಮಾತ್ರ, ಮರುಕ್ಷಣದಲ್ಲೆ ಅವಳ ಆಲೋಚನೆ ಬದಲಾಯಿತು. ಅಯ್ಯೋ! ನಾಳೆ ಒಂದು ಮುಖ್ಯ ಕಾರ್ಯಕ್ರಮ ಇದೆಯಲ್ಲವೆ. ಸಾವಿರಾರು ಜನಗಳ ಮುಂದೆ ನಾನು ನಾಟ್ಯವಾಡಬೇಕಲ್ಲವೆ.ಇಂದು ನಾನು ನನ್ನ ಬಾ ಳನ್ನು ಯೇಸುವಿಗೆ ಕೊಟ್ಟದರಿಂದ,ನಾಳೆ ಹೇಗೆ ನಾಟ್ಯವಾಡಲು ಸಾಧ್ಯ? ಎಂದು ಚಿಂತಿಸತೊಡಗಿದಳು.ಆ ದಿನ ವೇದಿಕೆಯಿಂದ ಹೇಳಲ್ಪಟ್ಟಂತ ಮಾತಿನ ಮೇರೆಗೆ ಅನೇಕರು ಬದಲಾದರು. ಆದರೆ ಮೆರ್ಲಿನ್ ತನ್ನ ಡೈರಿಯಲ್ಲಿ "ಇಂದು ಅಲ್ಲ, ಇಂದು ಅಲ್ಲ, ನಾಳೆ ನಾನು ಯೇಸುವನ್ನು ನನ್ನ ಬಾಳಿನಲ್ಲಿ ಅಂಗೀಕರಿಸಿಕೊಳ್ಳುತ್ತೇನೆ" ಎಂದು ಬರೆದುಕೊಂಡವಳಾಗಿ ಆ ಕೂಟವು ಮುಗಿಯುವ ಮುನ್ನವೆ ಮನದೋರಾಟದಲ್ಲಿ, ಕಾರನ್ನು ತೆಗೆದುಕೊಂಡು ವೇಗವಾಗಿ ತನ್ನ ಮನೆಗೆ ಹೊರಟಳು. ಮೆರ್ಲಿನಿನ ಒಳಮನಸ್ಸಿನಲ್ಲಿ ಮತ್ತೆ ಮತ್ತೆ ಆ ದೇವಮನುಷ್ಯನ ಮಾತುಗಳು ಓಡುತ್ತಲೇ ಇದ್ದಿತು. ಆಕೆ "ಇಂದು ಇಲ್ಲ, ಇನ್ನೂ ಒಂದೇ ಒಂದು ನಾಟ್ಯದ ನಂತರ ನಾಳೆ ನಾನು ಮಾನಸಾಂತರ ಹೊಂದುವೆನು" ಎನ್ನುತ್ತಲೇ ಚೆನ್ನಾಗಿಯೇ ಕಾರನ್ನು ಓಡಿಸಿದಳು. ಆದರೆ ಅಕಸ್ಮತಾಗಿ ಬಂದಂತ ಲಾರಿಯೊಂದು ಅವಳ ಕಾರಿಗೆ ಡಿಕ್ಕಿಹೊಡೆಯಿತು. ಕಾರಿ ಚಿಂದಿಯಾಗಿಬಿಟ್ಟಿತು.ರಕ್ತ ಹೊ ಳೆಯಲ್ಲಿ ಮೆರ್ಲಿನ್ ಹೆಣವಾಗಿ ಬಿದ್ದಿದ್ದಳು.ಅವಳು ಬರೆದಂತ ಡೈರಿಯು ಅಲ್ಲಿ ತೆರೆಯ ಲ್ಪಟ್ಟದಾಗಿ ಬಿದ್ದಿತ್ತು. 'ಇಂದು ಅಲ್ಲ, ಇಂದು ಅಲ್ಲ, ನಾಳೆ ನಾನು ಯೇಸುವನ್ನು ನನ್ನ ಬಾಳಿನಲ್ಲಿ ಅಂಗೀಕರಿಸಿಕೊಳ್ಳುತ್ತೇನೆ' ಎಂಬ ಸಾಲುಗಳೊಂದಿಗೆ...

ಪ್ರಿಯರೇ, ನಾಳೆಯನ್ನು ಸಂಧಿಸುವದರೊಳಗೆ ಆಕೆ ಮನ ಸಾಂತರ ಪಡುವದರೊಳಗೆ ಕತ್ತಲರಾಜ್ಯದೊಳಗೆ ಹೋಗಿಬಿಟ್ಟಳು! ನಾಳೆ ಎಂಬುವದು ನಮ್ಮ ಕೈಯಲ್ಲಿಲ್ಲಾ, ಒಳ್ಳೇ ತೀರ್ಮಾನಗಳನ್ನು ತೆಗಯುವದಕ್ಕೆ ಸಮಯವನ್ನು ತಳ್ಳಿದರೆ ಒಳ್ಳೇದಲ್ಲ. ಅದರಿಂದ ಅದನ್ನು ನಾವು ಅದನ್ನು ಕಳೆದುಕೊಳ್ಳುವ ಸಾಧ್ಯತೆ ಉಂಟು– ಮೆರ್ಲಿನಿನ ಹಾಗೆ.

ನಾವು ಈ ಭೂಮಿಯಲ್ಲಿ ಬಾಳುವ ಬಾಳು ನೆಲೆಯಿಲ್ಲದ್ದು. ಖಂಡಿತವಾಗಿ ಮರಣ ಒಂದು ದಿನ ನಮ್ಮನ್ನು ಸಂಧಿಸೇ ಸಂಧಿಸುತ್ತದೆ. ಅನಂತರವೇ ನಮಗೆ ನಿತ್ಯಜೀವನದ ಬಾಳು ಆರಂಭಗೊಳ್ಳಲಿದೆ. ಈ ಭೂಮಿಯಲ್ಲಿ ನಾವು ಮಾಡುವ ಪ್ರತಿಯೊಂದು ತಪ್ಪಿಗೂ ಮರಣದ ನಂತರ ಅನುಭವಿಸುವ ದಂಡನೆ ಅಥವಾ ಯಾತನೆ ಅದು ನಿತ್ಯನರಕ– ಅಂತ್ಯವಿಲ್ಲದ್ದು. ಇಂದೇ ತೀರ್ಮಾನ ಮಾಡಿರಿ.

*ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು;*
*ಅವುಗಳನ್ನು ಒಪ್ಪಿಕೊಂಡು ಬಿಟ್ಟುಬಿಡುವವನಿಗೆ ಕರುಣೆ*
*ದೊರೆಯುವದು. (ಜ್ಞಾನೋ;28:13)*


**VOICE OF JESUS PUBLICATIONS**
P.O.Box:6,Ramanathapuram.623501. S.Inidia.
Phone: 98941 31211- 94423 22264
Email: vojpulication@gmail.com

**VOICE OF JESUS MEDIA**
P.O.Box:7206,Bangalore- 560 072. Ph: 9731722977
Email: vojmedia@gmail.com



ಈ ಕರಪತ್ರಿಕೆಯನ್ನು ಉಚಿತವಾಗಿ ನೀಡಲಾಗುತ್ತದೆ ಮಾರಾಟ ಮಾಡುವುದಿಲ್ಲ



VOJ:TRACTS/2013/KANNADA